**ಈ ದಿನ ಸಲ್ಲಿಸಿದ್ದ ಮಧ್ಯಕಾಲಿನ ಅರ್ಜಿಯ ಆದೇಶದ ಮೇರೆಗೆ ಪಾಟಿಯನ್ನು ಮುಂದೆ ಕರೆಯಿಸಿ ಮುಂದುವರಿದ ಮುಖ್ಯ ವಿಚಾರಣೆ ಮಾಡಲಾಯಿತು.**

6. ನನಗೆ ಶಾಲೆಯಿಂದ ಘಟನೆ ನಡೆದ ದಿನಾಂಕಃ 07-01-2023 ರಂದು ಘಟನೆ ಬಗ್ಗೆ ಮಾಹಿತಿ ನೀಡಿ ಫೋನ್ ಕರೆ ಮಾಡಿದ್ದರು ಎಂದು ನುಡಿದಿದ್ದು, ಆ ಸಮಯದಲ್ಲಿ ನಾನು ಹುಣಸೂರಿನ ಸಾಯಿಬಾಬ ಮಂದಿರದ ಹಿಂಭಾಗದಲ್ಲಿರುವ ನಮ್ಮ ಮನೆಯಲ್ಲಿ ಇದ್ದ ಶಾಲೆ ಕಲ್ಕುಣಿಕೆಯಲ್ಲಿ ಇದೆ, ನಮ್ಮ ಮನೆಗೂ ಶಾಲೆಗೂ ಸುಮಾರು 2-3 ಕಿ.ಮೀ ದೂರ ಇರಬಹುದು ಎಂದು ನುಡಿದಿರುತ್ತಾರೆ.

7. ನಾನು ಆ ದಿನ ಶಾಲೆಗೆ ಹೋಗಲು ತಯಾರಾಗುತ್ತಿದ್ದೆ. ಆದ್ದರಿಂದ 7-20 ರಿಂದ 7-30 ರ ಒಳಗೆ ಮಾಮೂಲಿಯಂತೆ ಶಾಲೆ ತಲುಪಿದೆ. ಶಾಲೆಯಲ್ಲಿ ಅಟೆಂಡರ್ ಇದ್ದರು. ಅವರು ನನಗೆ ಕರೆ ಮಾಡಿದ್ದರು. ನಾನು ಶಾಲೆಗೆ ಹೋಗುವಷ್ಟರಲ್ಲಿ ಸ್ಥದಲ್ಲಿ ಸುಮಾರು 20-30 ಸಾರ್ವಜನಿಕರು ಸೇರಿಕೊಂಡಿದ್ದರು. ನಮ್ಮ ಶಾಲೆಯ ಅಕ್ಷರ ದಾಸೋಹ ಯೋಜನೆ ಮೇಲ್ವಿಚಾರಣೆಗೆ ನಮ್ಮ ಸಹೋದ್ಯೋಗಿಗಳನ್ನು ನೇಮಕ ಮಾಡಲಾಗಿರುತ್ತದೆ ಎಂದರೆ ಸರಿ.

8. ನಮ್ಮ ಶಾಲೆಗೆ ಅಕ್ಷರ ದಾಸೋಹದ ದಾಸ್ತಾನು ತಿಂಗಳ ಲೆಕ್ಕದಲ್ಲಿ ಬರುತ್ತಿತ್ತು.ಎಣ್ಣೆ, ಅಕ್ಕಿ, ಹಾಲಿನ ಪುಡಿ ಸಹ ತಿಂಗಳಿಗೊಮ್ಮೆ ಬರುತ್ತಿತ್ತು ಎಂದರೆ ಸರಿ. ದಾಸ್ತಾನು ನಮಗೆ ಸರಬಾರಾಜು ಮಾಡಲು ದಿನಾಂಕ ನಿಗಧಿ ಮಾಡಿರುವುದಿಲ್ಲ, ಸಂಬಂಧಪಟ್ಟ ಇಲಾಖೆಗೆ ದಾಸ್ತಾನು ಬಂದ ತಕ್ಷಣ ನಮಗೆಲ್ಲಾ ವಿಲೇವಾರಿ ಮಾಡುತ್ತಾರೆ. ನಮ್ಮ ಶಾಲೆಯ ಅಕ್ಷರ ದಾಸೋಹದ ದಾಸ್ತಾನನ್ನು ಎಷ್ಟು ಬಂದಿದೆ, ಎಷ್ಟು ಬಳಸಲಾಗಿದೆ, ಎಷ್ಟು ಉಳಿದಿದೆ ಎಂದು ಸಂಬಂಧಪಟ್ಟ ರಿಜಿಸ್ಟರ್ ನಲ್ಲಿ ನಮೂದಿಸಲಾಗುತ್ತದೆ ಎಂದರೆ ಸರಿ. ಸದರಿ ರಿಜಿಸ್ಟರ್ ನ್ನು ನಾನು ತನಿಖಾಧಿಕಾರಿಗೆ ಮತ್ತು ನ್ಯಾಯಾಲಯಕ್ಕೆ ಒದಗಿಸಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ನೀಡಿದ್ದೆ.

9. ಪಂಚನಾಮೆಗೆ ಇಬ್ಬರು ಪೋಲಿಸರು ಬಂದಿದ್ದರು. ಅಕ್ಕಿ ಯಾವ ಬ್ಯಾಗಿನಲ್ಲಿ ಇತ್ತು ಎಂದು ಪಂಚನಾಮೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ , ಬರೆಸಿದ್ದೇನೆ ಆದರೆ ಈಗ ನಿಪಿ-2ರ ಪಂಚನಾಮೆಯನ್ನು ನೋಡಿ ಹೇಳಲು ಸಾಧ್ಯವಿಲ್ಲ, ಕಾರಣ ನನಗೆ ಇಂದು ಕನ್ನಡಕ ಇರುವುದಿಲ್ಲ. ಆ ದಿನ ಇತ್ತು ಎನ್ನಲಾದ ಇಂಡೇನ್ ಗ್ಯಾಸ್ 14.2 ಕೆ.ಜಿ ಇದೆ ಎಂದು ಸಿಲಿಂಡರ್ ಮೇಲೆ ಬರೆಯಲಾಗಿರುತ್ತದೆ. ಸಿಲಿಂಡರ್ ಎಷ್ಟು ತೂಕದಲ್ಲಿ ಇತ್ತು

ಎಂದು ಬರೆಸಲಾಗಿದೆಯಾ ಎಂದರೆ ಗೃಹ ಬಳಕೆಗೆ ನೀಡುವ ಸಿಲಿಂಡರ್ ಆಗಿದ್ದರಿಂದ ಎಲ್ಲಾ ಸಿಲಿಂಡರ್ ತೂಕ 14.2 ಇರುತ್ತದೆ ಎಂದು ನುಡಿಯುತ್ತಾರೆ . ಗ್ಯಾಸ್ ಸಿಲಿಂಡರ್ ಪುಸ್ತಕವನ್ನು ನಾನು ಇಲ್ಲಿ ಹಾಜರುಪಡಿಸಿಲ್ಲ ಎಂದರೆ ನನಗೆ ಕೇಳಿಲ್ಲ, ನಾನು ಕೊಟ್ಟಿಲ್ಲ. ಪಂಚನಾಮೆ ಬರೆದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ.

10. ಪಂಚನಾಮೆ ಸಮಯದಲ್ಲಿ ಪೋಲಿಸರು ಪೋಟೋ ತೆಗೆದಿದ್ದರು. ನಾನು ಹೇಳಿದಂತೆ ಯಾವುದೇ ಕಳ್ಳತನ ಆಗಿದುದ, ನಮ್ಮಲ್ಲೇ ಏನೋ ಲೋಪ ಆಗಿದ್ದು ಅದನ್ನು ಮುಚ್ಚಿಡಲು 4ನೇ ಆರೋಪಿಯ ವಿರುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಬಂದಾಗ ಸ್ಥಳದಲ್ಲಿ ಒಡೆದು ಹೋಗಿದ್ದ ಬೀಗ ಇತ್ತು. ಅದರ ವಿಚಾರವನ್ನು ಪಂಚನಾಮೆಯಲ್ಲಿ ಬರೆದಿದ್ದಾರೋ ಇಲ್ಲವೊ ಎಂದು ಈಗ ನನಗೆ ನೆನಪಿಲ್ಲ. ಹಾಗಾದರೆ ಪಂಚನಾಮೆ ಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 3-4 ವರ್ಷ ಆಗಿದೆ ಆದ್ದರಿಂದ ನನಗೆ ನೆನಪಿಲ್ಲ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

**4ನೇ ಆರೋಪಿ ಪರ ವಕೀಲರು ಆರೋಪಿ-1 ಮುತ್ತ 2 ರವರ ಪರ ಮಾಡಿರುವ ಪಾಟೀ ಸವಾಲನ್ನು ತಮ್ಮ ಮುಂದುವರಿದ ಪಾಟೀ ಸವಾಲು ಎಂದು ಪರಿಗಣಿಸಲು ಕೋರಿದು, ಅವರ ಮನವಿಯನ್ನು ಅಂಗೀಕರಿಸಲಾಯಿತು.**

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು) .

ಓ. ಹೇ. ಕೇ. ಸ. ಇದೆ. ,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ. ಎಂ. ಎಫ್. ಸಿ. , ಹುಣಸೂರು.